ಇ) ಈ ಕೆರೆಗಳ ಕೆಲಸ ಪೂರ್ಣವಾಗಿದೆ.

ಈ) ಇಲ್ಲಿಯವರೆಗೆ ಇವುಗಳಿಗೆ ಖರ್ಚಾದ ಮೊತ್ತ ರೂ. 10.00 ಲಕ್ಷ. ಹಾಗೂ ಯಾವುದೇ ಹಣ ಉಳಿದಿರುವುದಿಲ್ಲ.

ಶಾಸಕರ ಭವನದ ಆಸ್ಪತ್ರೆಯಲ್ಲಿನ ವೈದ್ಯಕೀಯ ಔಷಧಿ ದುರುಪಯೋಗ

1174 (1377) ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರ ಭವನದಲ್ಲಿರುವ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ವರ್ಗದವರು ಶಾಸಕರಿಗೆ ಮೀಸಲಿರಿಸಿದ ಹೆಚ್ಚಿನ ಬೆಲೆಯ ಔಷಧಿಗಳು ಮೆಡಿಕಲ್ ಸ್ಟೋರ್ಸ್ ಹಾಗೂ ಇತರೆ ಆಸ್ಪತ್ರೆಗಳಿಗೆ ನೀಡಲಾಗಿದೆಯೆಂಬ ವರದಿಯು ಸರ್ಕಾರಕ್ಕೆ ಬಂದಿದೆಯೇ; ಇದರ ಮೊತ್ತ ಎಷ್ಟು;

ಆ) ಬಂದಿದ್ದಲ್ಲಿ, ತಪ್ಪಿತಸ್ಥರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಇ) ಮುಂದೆ ಇಂತಹ ಘಟನೆಗಳು ಸಂಬಧಿಸಿದಂತೆ ತೆಗೆದುಕೊಳ್ಳಲಾಗಿರುವ ಕ್ರಮ ಏನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ. ವಿಷಯವು ವಿಚಾರಣೆ ಹಂತದಲ್ಲಿರುವುದರಿಂದ ನಿಖರವಾದ ಮೊತ್ತವೆಷ್ಟು ಎಂದು ಹೇಳಲು ಸಾಧ್ಯವಾಗುತ್ತಿಲ್ಲ

ಆ) 1) ಅಲ್ಲಿಯ ವೈದ್ಯರು ಮತ್ತು ಸಿಬ್ಬಂದಿಯನ್ನು ವರ್ಗಮಾಡಲಾಗಿದೆ.

2) ವಿಚಾರಣೆ ಪ್ರಕ್ರಿಯೆಯಲ್ಲಿದೆ.

ಇ) ವಿಚಾರಣಾ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಮೈಸೂರು ಜಿಲ್ಲೆಯಲ್ಲಿ ಸ್ವಚ್ಛ ಗ್ರಾಮ ಯೋಜನೆ

1175 (1379) ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯ ಎಷ್ಟು ಗ್ರಾಮಗಳಲ್ಲಿ ಸ್ವಚ್ಛ ಗ್ರಾಮ ಯೋಜನೆಯನ್ನು ಅಳವಡಿಸಲಾಗಿದೆ; ತಾಲ್ಲೂಕುವಾರು ವಿವರ ನೀಡುವುದು;

ಆ) ಸ್ವಚ್ಛ ಗ್ರಾಮ ಯೋಜನೆಗಳು ಯಾವ ಯಾವ ಹಂತದಲ್ಲಿದೆ; ಪಿರಿಯಾಪಟ್ಟಣ ತಾಲ್ಲೂಕಿನ ಮಾಹಿತಿ ನೀಡುವುದು;

ಇ) ಹೊಸದಾಗಿ ಯೋಜನೆಯನ್ನು ಅಳವಡಿಸಿಕೊಳ್ಳಲು ಗ್ರಾಮಸ್ಥರು ಇಚ್ಛಿಪಟ್ಟಲ್ಲಿ ಈ ಯೋಜನೆಯನ್ನು ಅಳವಡಿಸಲು ಅವಕಾಶವಿದೆಯೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು)

ಅ) ಅನುಬಂಧ-1ರಲ್ಲಿ ವಿವರಗಳನ್ನು ನೀಡಲಾಗಿದೆ.

ಆ) ಅನುಬಂಧ-1ರಲ್ಲಿ ವಿವರಗಳನ್ನು ನೀಡಲಾಗಿದೆ.

ಇ) ಇಲ್ಲ.